ಮೂಲಕ ನೀರು ಸರಬರಾಜುಮಾಡುವುದು ಸೇರಿರುತ್ತದೆ. ಈ ಯೋಜನೆಯನ್ನು ಜುಲೈ 2000ಕ್ಕೆ ಚಾಲನೆಗೊಳಿಸಲು ಉದ್ದೇಶಿಲಾಗಿದೆ. ಈ ಯೋಜನೆಯನ್ನು 2021ನೇ ಇಸವಿಗೆ ಉಹಿಸಲಾದ 2,70,000 ಜನಸಂಖ್ಯೆ ದಿನಂ ಪ್ರತಿ ತಲಾ 115 ಲೀಟರ್ ನಂತೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

ಮದ್ದೂರು ತಾಲ್ಲೂಕಿನ ಶಿಂಷಾನದಿಯಲ್ಲಿ ಮರಳು ತೆಗೆಯುವುದನ್ನು ನಿಷೇಧಿಸಿರುವುದು

1060 (1259) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಮದ್ದೂರು ತಾಲ್ಲೂಕಿನ ಶಿಂಷಾ ನದಿಯ ಪ್ರಾತದಲ್ಲಿ ಮರಳು ತೆಗೆಯುವುದನ್ನು ನಿಷೇದಿಸಲಾಗಿದೆಯೇ?

2. ಹಾಗಿದ್ದಲ್ಲಿ ಸಾರ್ವಜನಿಕರಿಗೆ ಮರಳನ್ನು ಪಡೆಯಲು ಸರ್ಕಾರವು ಪರ್ಯಾಯ ವ್ಯವಸ್ಥೆಯನ್ನು ಮಾಡುವುದೇ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು)

1. - ಹೌದು -

2. ಮೇಲ್ಕಂಡ ನಿಷೇದಿತ ಪ್ರದೇಶವನ್ನು ಬಿಟ್ಟು ಮದ್ದೂರು ತಾಲ್ಲೂಕಿನ ಇತರೆ ಪ್ರದೇಶಗಳಲ್ಲಿ ಮರಳು ತೆಗೆದುಸಾಗಿಸಲು ಪರವಾನಿಗೆಯನ್ನು ನೀಡಲಾಗುತ್ತಿದೆ.

ಮಂಡ್ಯ ನಗರದಲ್ಲಿ ಒಳಚರಂಡಿಯ ಸೌಲಭ್ಯದ ಕಾಮಗಾರಿ

1061 (1260) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಡ್ಯ ನಗರದಲ್ಲಿ ಒಳಚರಂಡಿಯ ಸೌಲಭ್ಯದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿಯ ವಿವರಗಳೇನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಮಂಡ್ಯ ನಗರಕ್ಕೆ ಒಳಚರಂಡಿ ಯೋಜನೆ ಯನ್ನು ರೂ. 330 ಲಕ್ಷಗಳ ಅಂದಾಜು ಪೆಚ್ಚದಲ್ಲಿ ಕೈಗೊಂಡಿದ್ದು. ಈ ಯೋಜನೆಯಡಿಯಲ್ಲಿ ಮಂಡ್ಯ ನಗರದಲ್ಲಿ ಅಳು ಗುಂಡಿಗಳನ್ನು ನಿರ್ಮಿಸುವುದು, ಕೊಳವೆಗಳನ್ನು ಅಳವಡಿಸುವುದುಹಾಗೂ ಕೊಳಚೆ ಶುದ್ಧೀಕರಣಾ ಘಟಕಗಳನ್ನು ನಿರ್ಮಿಸುವ ಕಾಮಗಾರಿಗಳು ಒಳಗೊಂಡಿರುತ್ತದೆ. ಕೊಳಚೆ ಶುದ್ಧೀಕರಣಾಗಾರದ ಘಟಕ ಹೊರತುಪಡಿಸಿ ಉಳಿದ ಕಾಮಗಾರಿಗಳು ಮುಗಿದಿರುತ್ತದೆ. ಶುದ್ಧೀಕರಣಾ ಘಟಕಕ್ಕೆ ಬೇಕಾದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವಲ್ಲಿ ವಿಳಂಬವಾದುದದ್ದರಿಂದ ಕಾಮಗಾರಿ ವಿಳಂಬವಾಗಿರುತ್ತದೆ.